
ತಮಿಳುನಾಡಿನ ನಾಯನಾರ್ ಸಂತರು – ೪

# ಅಪ್ಪರ್ ಮತ್ತು ಸಂಬಂಧರ್

ಕಥೆ:ಆರ್. ವಿ.

ಚಿತ್ರ : ಶಂಕರ್


**1** ಶೀರ್ಗಾಳಿಯಲ್ಲಿ ಮಹಾನ್ ಶಿವಭಕ್ತರಾದ ಶಿವಪಾದಹೃದಯರ್ ದೇಗುಲದ ಕೆರೆಯಲ್ಲಿ ಸ್ನಾನ ಮಾಡುತ್ತಿದ್ದರು. ಅವರ ಮೂರು ವರ್ಷದ ಮಗು ಸಂಬಂಧರ್ ಕೆರೆಯ ದಡದಲ್ಲಿ ಕುಳಿತಿತ್ತು. ಮಂತ್ರಗಳನ್ನು ಉಚ್ಚರಿಸುತ್ತಿದ್ದ ತಂದೆ ಬಹಳ ಹೊತ್ತಾದರೂ ಕೆರೆಯಿಂದ ಹೊರಗೆ ಬರಲಿಲ್ಲ. ಭಯಗೊಂಡ ಮಗು ದೇಗುಲದ ಕಡೆಗೆ ನೋಡುತ್ತ ಕರೆಯತೊಡಗಿತು.





**2** ಮಗುವಿನ ಕೂಗನ್ನು ಕೇಳಿದ ಶಿವ ಹಾಗೂ ಪಾರ್ವತಿ ಕೂಡಲೇ ಮಗುವಿನ ಬಳಿಗೆ ಬಂದರು. ಶಿವನ ಮಾತಿನಂತೆ ಜಗನ್ಮಾತೆ ಮಗುವಿಗೆ ಶಿವಜ್ಞಾನವನ್ನು ನೀಡುವ ಅಮೃತದೊಂದಿಗೆ ತನ್ನ ಎದೆ ಹಾಲನ್ನು ಕುಡಿಸಿದಳು. ಆ ಕ್ಷಣದಲ್ಲೇ ಆ ಮಗು ತಿರುಜ್ಞಾನ ಸಂಬಂಧರ್ ಆದರು.




**3** ತಂದೆ ಸ್ನಾನ ಮುಗಿಸಿ ದಡಕ್ಕೆ ಹಿಂದಿರುಗಿದಾಗ ತನ್ನ ಮಗನ ಬಾಯಿಂದ ಹಾಲು ತುಸು ಹೊರಚೆಲ್ಲಿದ್ದನ್ನು ಕಂಡರು. ಅವರಿಗೆ ಕೋಪವುಕ್ಕಿ ಬಂತು.





**4** ಅದನ್ನು ತಿಳಿದು ಶಿವಪಾದರಿಗೆ ಭಾವವುಕ್ಕಿ ಬಂತು. ಈ ಕಥೆಯನ್ನು ಕೇಳಿ ಊರಿನವರೆಲ್ಲ ಅಲ್ಲಿಗೆ ಓಡಿ ಬಂದರು. ಸಂಬಂಧರನ್ನು ಎಲ್ಲರೂ ಎತ್ತಿಕೊಂಡು ಮೆರವಣಿಗೆ ಮಾಡಿದರು.



**5** ಒಂದು ದಿನ ಸಂಬಂಧರ್ ಭಕ್ತರೊಂದಿಗೆ ತಿರುಕೋಲಕ್ಕಾ ಎಂಬ ಸ್ಥಳಕ್ಕೆ ಹೊರಟರು. ಅವರು ಹತ್ತು ಸಾಲುಗಳಿರುವ ಹಾಡನ್ನು ಹಾಡುತ್ತಾ , ಕೈ ತಟ್ಟಿ ಚಪ್ಪಾಳೆ ಹಾಕುತ್ತಾ ಲಯಬದ್ಧವಾಗಿ ಹೋಗುತ್ತಿದ್ದರು. ದೇವಾಲಯವನ್ನು ತಲುಪಿದಾಗ ಅವರಿಗೆ ಶಿವನು ಚಿನ್ನದ ಕರತಾಳಗಳನ್ನು ಕರುಣಿಸಿದನು.





**6** ಸಂಬಂಧರ್ ಯಾವುದೇ ದೇವಾಲಯಕ್ಕೆ ಯಾತ್ರೆ ಹೋದಾಗಲೂ ಅವರ ತಂದೆ ಅವರನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗುತ್ತಿದ್ದರು. ತಿರುನೇಲ್ವಯಿಲ್ ಎಂಬ ಕ್ಷೇತ್ರದಲ್ಲಿ ಅರ್ಚಕರು ಅವರನ್ನು ದೇಗುಲದ ಮಹಾದ್ವಾರದಲ್ಲಿ ಸ್ವಾಗತಿಸಿ ಗೌರವಿಸಿದರು.




**7** ಶೀರ್ಗಾಳಿಯಲ್ಲಿ ಅವರಿಗೆ ಯಜ್ಞೋಪವೀತ ಧಾರಣೆಯಾಯಿತು. ಆಗ ಅವರು ಅಲ್ಲಿ ವೇದಮಂತ್ರ ಹಾಗೂ ಪಂಚಾಕ್ಷರೀ ಮಂತ್ರಗಳ ಅರ್ಥವನ್ನು ವಿವರಿಸಿದರು.


**8** ಅಲ್ಲಿಂದ ಅವರು ಅನೇಕ ದೇವಾಲಯಗಳನ್ನು ಸಂದರ್ಶಿಸಿದರು. ಭಕ್ತರು ಅವರನ್ನು ಪಲ್ಲಕ್ಕಿಯಲ್ಲಿ ಹೊತ್ತು ಕರೆದೊಯ್ಯುತ್ತಿದ್ದರು. ಸಂಬಂಧರ್ ಶಿವನ ಸ್ತುತಿ ಮಾಡುತ್ತಿದ್ದರು. ಮಳನಾಡಿನ ರಾಜ ಕೊಲ್ಲಿ ಮಳವನ್ ದೇವಾಲಯದ ಮಹಾದ್ವಾರದಲ್ಲಿ ಸಂಬಂಧರು ಬರುವುದನ್ನೇ ಕಾಯುತ್ತಾ ನಿಂತಿದ್ದನು.





ಸಂಬಂಧರ್ ಶಿವನ ಮಹಿಮೆಯನ್ನು ಕೊಂಡಾಡುವ ಸ್ತುತಿಯನ್ನು ಹಾಡಿದ ಕೂಡಲೇ ಆಕೆ ರೋಗಮುಕ್ತಳಾಗಿ ಎದ್ದು ಕುಳಿತಳು.

**9** ಸಂಬಂಧರ್ ತಿರುಪ್ಪಗಲೂರ್ ಎಂಬಲ್ಲಿ ವಾಸವಾಗಿದ್ದರು. ಆಗ ತಿರುವಾರೂರಿನಿಂದ ಮಹಾನ್ ಸಂತರಾದ ತಿರುನಾವುಕ್ಕರಸರು ತಮ್ಮನ್ನು ನೋಡಲು ಬರುತ್ತಾರೆ ಎಂಬ ಸುದ್ದಿ ತಲುಪಿತು. ಅವರನ್ನು ಅಪ್ಪರ್ ಎಂದೂ ಕರೆಯುತ್ತಿದ್ದರು. ಅವರನ್ನು ಸ್ವಾಗತಿಸಲು ಸಂಬಂಧರ್ ಹೊರಟರು.


**10** ಊರಿನ ಹೊರಗೆ ಸಂತರಿಬ್ಬರ ಭೇಟಿಯಾಯಿತು. ಇಬ್ಬರೂ ಪರಸ್ಪರ ನಮಸ್ಕರಿಸಿದರು; ಆಲಂಗಿಸಿಕೊಂಡರು.





**11** ಅಲ್ಲಿ ಕೆಲವು ದಿನಗಳಿದ್ದ ನಂತರ ಅವರಿಬ್ಬರೂ ಹಲವು ಪುಣ್ಯಕ್ಷೇತ್ರಗಳನ್ನು ಜೊತೆಯಾಗಿಯೇ ಸಂದರ್ಶಿಸಿದರು.




**12** ಅವರಿಬ್ಬರೂ ಭಾವಭರಿತವಾಗಿ ಹಾಡುತ್ತಾ ತಿರುವೀಳಿಮಲೆ ತಲುಪಿದರು. ಆಗ ಅಲ್ಲಿ ಕ್ಷಾಮವುಂಟಾಗಿತ್ತು. ಜನರಿಗೆ ಆಹಾರ ಸಿಗುತ್ತಿರಲಿಲ್ಲ. ಅವರಿಗೆ ಶಿವನು ಕನಸಿನಲ್ಲಿ ಕಾಣಿಸಿಕೊಂಡನು.




13
ಅಂತೆಯೇ ಅವರಿಬ್ಬರೂ ಆ ನಾಣ್ಯಗಳಿಂದ ಧಾನ್ಯ, ದಿನಸಿ ಖರೀದಿಸಿ ಜನರಿಗೆ ಭೋಜನ ಮಾಡಿಸಿದರು.
14
ಕೆಲವೇ ದಿನಗಳಲ್ಲಿ ಅಲ್ಲಿ ಚೆನ್ನಾಗಿ ಮಳೆಯಾಯಿತು. ಕ್ಷಾಮ ತೊಲಗಿತು. ಸಂತರಿಬ್ಬರೂ ವೇದಾರಣ್ಯಂ ತಲುಪಿದರು.
ದೇವಾಲಯದ ಎದುರು ಭಾಗದ ಮಹಾದ್ವಾರ ಮುಚ್ಚಿರುವುದೇಕೆ? ಬೇರೆ ದ್ವಾರಗಳ ಮೂಲಕ ಭಕ್ತರು ಏಕೆ ಒಳಗೆ ಹೋಗುತ್ತಾರೆ?
ಒಂದು ಸಲ ವೇದಗಳು ಇಲ್ಲಿಗೆ ಬಂದು, ದೇವರನ್ನು ಪೂಜಿಸಿ, ಬಾಗಿಲು ಹಾಕಿ ಹೋದವು. ಅಂದಿನಿಂದ ಇದು ಹೀಗೆಯೇ ಉಳಿದಿದೆ.
ಅಪ್ಪರ್! ನಾವು ಈ ದ್ವಾರದ ಮೂಲಕವೇ ಒಳಗೆ ಹೋಗಿ ದೇವರ ಪೂಜೆ ಮಾಡಬೇಕು. ಅದಕ್ಕಾಗಿ ಇದರ ಅಗಳಿ ತೆರೆಯುವಂತೆ ದೇವರಿಗೆ ಪ್ರಾರ್ಥನೆ ಮಾಡಿ.
15
ಅಪ್ಪರ್ ಒಂದು ದಶಕವನ್ನು ಹಾಡಿದರು. ಆಗ ಅಗಳಿಯೆಲ್ಲ ಕಳಚಿ, ಬಾಗಿಲು ತೆರೆಯಿತು. ಅವರಿಬ್ಬರೂ ದೇವರ ಪೂಜೆ ಮಾಡಿ ಹಿಂದಿರುಗಿದರು.
ಭಕ್ತರ ದರ್ಶನಕ್ಕಾಗಿ ಸುಲಭವಾಗಿ ಬಾಗಿಲು ಮುಚ್ಚಿ, ತೆರೆಯುವಂತೆ ಮಾಡಲು ನೀವೂ ಒಂದು ಸ್ತುತಿ ಮಾಡಿ.
(ಸ್ತುತಿ ಮಾಡಿದ ನಂತರ) ಇನ್ನು ಮುಂದೆ ಬಾಗಿಲುಗಳು ಸುಲಭವಾಗಿ ತೆರೆಯುವವು ಹಾಗೂ ಮುಚ್ಚುವವು!
16
ನಾನು ದಶಕವನ್ನು ಹಾಡಿದ ನಂತರವೂ ಬಾಗಿಲು ತೆರೆಯಲಿಲ್ಲ. ನಾನು ಇನ್ನೊಂದು ಸ್ತೋತ್ರ ಹಾಡಬೇಕಾಯಿತು. ಆದರೆ ನೀವು ಒಂದೇ ಸ್ತೋತ್ರವನ್ನು ಹಾಡಿದಾಗ ಈ ದ್ವಾರವನ್ನು ತೆರೆಯುವುದು, ಮುಚ್ಚುವುದು ಸುಲಭವಾಯಿತು.
ಸ್ವಾಮಿ, ದೇವರಿಗೆ ನೀವು ಹಾಡುವುದನ್ನು ಹೆಚ್ಚಾಗಿ ಕೇಳಬೇಕಿತ್ತು. ಅದಕ್ಕಾಗಿ ಬಾಗಿಲು ತೆರೆಯಲಿಲ್ಲ. ಆದರೆ ಅವನಿಗೆ ನನ್ನ ಒಂದು ಸ್ತೋತ್ರವನ್ನು ಕೇಳುವಷ್ಟರಲ್ಲಿ ಸಾಕಾಗಿ ಬಿಟ್ಟಿತು. ಅದಕ್ಕೇ ಬಾಗಿಲು ಮುಚ್ಚಿಬಿಟ್ಟಿತು.